# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಲಗ್ಗೆರೆ ಉಪವಿಭಾಗ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, ಝಿನ್ ಪಾರ್ಕ್ ಕಾಂಪೌಂಡ್, ನಾಗರಬಾವಿ 2ನೇ ಹಂತ, ಬೆಂಗಳೂರು-560 072**

**ವಾರ್ಡ್ ಸಂಖ್ಯೆ 73 ರಲ್ಲಿ ದಿನಾಂಕ:-16.01.2021 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ವಿಜಯ್ ಕುಮಾರ್, ಮುಖ್ಯ ಅಭಿಯಂತರರು, ರಾರಾನಗರ, ಹಾಗೂ ನೊಡಲ್ ಅಧಿಕಾರಿ-73, ಕೊಟ್ಟಿಗೆಪಾಳ್ಯ.
2. ಶ್ರೀ.ಜಿ.ಮೋಹನ್ ಕುಮಾರ್, ಮಾಜಿ ಸದಸ್ಯರು, ಬಿ.ಬಿ.ಎಂ.ಪಿ, ವಾ-73 ಕೊಟ್ಟಿಗೆಪಾಳ್ಯ
3. ಶ್ರೀ. ನವೀನ್ ಆರ್, ಸಹಾಯಕ ಅಭಿಯಂತರರು, ವಾರ್ಡ 73.
4. ಶ್ರೀ.ವಿನಾಯಕ ದತ್ತ ನಾಯ್ಕ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
5. ಶ್ರೀ.ದಿನೇಶ್.ಎನ್. ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
6. ಶ್ರೀ.ಮಾರುತಿ.ಎಸ್, (ಗುತ್ತಿಗೆದಾರರು) ಘನತ್ಯಾಜ್ಯ ವಿಲೇವಾರಿ
7. ಶ್ರೀ ಲಕ್ಷ್ಮೀನಾರಾಯಣ, ಕಿರಿಯ ಆರೋಗ್ಯ ಪರಿವೀಕ್ಷಕರು,
8. ಶ್ರೀ. ಬಾಬು, ಸೂಪರ್‌ವೈಸರ್
9. ಸಂಘ ಸಂಸ್ಥೆಗಳ ಕಾರ್ಯದರ್ಶಿಗಳು.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ.**

ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.

1. ಬೇರೆ ವಾರ್ಡಿನಿಂದ ಒಣ ಕಸ ತಂದು ಹಾಕುತ್ತಿರುವುದು ಕಂಡುಬಂದಿದ್ದು ಸದರಿಯವರಿಗೆ FIR ದಾಖಲಿಸಲು ಮಾನ್ಯ ನೋಡೆಲ್ ಅಧಿಕಾರಿಗಳು ತಿಳಿಸಿರುತ್ತಾರೆ.
2. ಒಣಕಸ ವಿಲೇವಾರಿಗೆ ತುರ್ತಾಗಿ ವಾಹನಗಳನ್ನು ಒದಗಿಸಲು ತಿಳಿಸಿರುತ್ತಾರೆ.
3. ಆರ್.ಎಫ್.ಐ.ಡಿ ಕಡತಗಳನ್ನು ಶೀಘ್ರವಾಗಿ ಕಾರ್ಯಚಾರಣೆ ಮಾಡುವಂತೆ ತಿಳಿಸಿರುತ್ತಾರೆ.
4. ಹೆಚ್ಚುವರಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ಲಾರಿ ಮತ್ತು ಜೆಸಿಬಿಗಳನ್ನು 15 ದಿನಗಳವರೆಗೆ ಬಾಡಿಗೆ ನೀಡುವಂತೆ ಗುತ್ತಿಗೆದಾರರು ಕೋರಿರುತ್ತಾರೆ.
5. ಪಾಪೆರೆಡ್ಡಿ ಮುಖ್ಯರಸ್ತೆ ಮತ್ತು ತೆರಿಗೆ ಭವನ ಮುಖ್ಯರಸ್ತೆಗಳ ಸುತ್ತಮುತ್ತಲಿನ ರಸ್ತೆಗಳ ಅಕ್ಕ ಪಕ್ಕದಲ್ಲಿ ಗಿಡಗಳನ್ನು ತೆಗೆಯುವಂತೆ ಕ್ರಮವಹಿಸುವುದು.

**ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ ಚರ್ಚಿಸುವ ವಿಚಾರ.**

1. 11ನೇ ಬ್ಲಾಕ್, ತೆರಿಗೆ ಭವನ ಮುಖ್ಯರಸ್ತೆಯಲ್ಲಿ Intensive Cleaning ನಡೆಸಲು ಮುಖ್ಯ ಅಭಿಯಂತರರು ವಾ-73 ಸಹಾಯಕ ಅಭಿಯಂತರವರಿಗೆ ಸೂಚಿಸಿರುತ್ತಾರೆ.
2. ಸಜ್ಜೇಪಾಳ್ಯ ಚರಂಡಿಗಳ ದುರಸ್ಥಿಯ ಕಾರ್ಯವನ್ನು ಶೀಘ್ರವಾಗಿ ಮುಗಿಸಲು ಮಾನ್ಯ ಮಾಜಿ ಸದಸ್ಯರಾದ ಶ್ರೀ.ಜಿ.ಮೋಹನ್ ಕುಮಾರ್ ರವರು ತಿಳಿಸಿರುತ್ತಾರೆ.
3. ವಾರ್ಡ 73ರ ವ್ಯಾಪ್ತಿಯಲ್ಲಿ ಶ್ರೀ ಪೂಜಪ್ಪ ರವರು ಒಂಟಿಮನೆ ಫಲಾನುಭವಿಗಳ ವಿಷಯದ ಬಗ್ಗೆ ಚರ್ಚಿಸಿ ಕಡತವನ್ನು ಮಂಡಿಸಲು ತಿಳಿಸಿರುತ್ತಾರೆ.
4. ಮಾಳಗಾಳ ಅಂಗನವಾಡಿ ಕೇಂದ್ರ ಹಾಗೂ ಗಣಪತಿ ದೇವಸ್ಥಾನದ ತಡೆಗೋಡೆಯ ಜಾಬ್‌ಕೋಡ್‌ಅನ್ನು ತಿದ್ದುಪಡಿ ಮಾಡುವಂತೆ ಶ್ರೀ.ಜಿ.ಮೋಹನ್ ಕುಮಾರ್ ರವರು ತಿಳಿಸಿರುತ್ತಾರೆ.
5. ಮಾಳಗಾಳ ರಸ್ತೆಯ ಹೊಸ ಮೋರಿಗಳ ಅಂದಾಜು ಪಟ್ಟಿಯನ್ನು ಜಾಬ್‌ಕೋಡ್ ಅನುಗುಣವಾಗಿ ತಯಾರಿಸುವಂತೆ ತಿಳಿಸಿರುತ್ತಾರೆ.
6. ಗಂಗಮ್ಮ ಗಾರ್ಡನ್, ಬಂಡೇಮಾರಮ್ಮ ದೇವಸ್ಥಾನದ ಹತ್ತಿರ, 13ನೇ ಬ್ಲಾಕ್‌ನಲ್ಲಿ ಕಲ್ವರ್ಟ್‌ಗಳನ್ನು ಸರಿಪಡಿಸುವಂತೆ ತಿಳಿಸಿರುತ್ತಾರೆ.
7. ಮುತ್ತುರಾಯಸ್ವಾಮಿ ಬಡಾವಣೆಯ ರಸ್ತೆಗಳ ಮೋರಿಗಳ ಮೇಲೆ ಹಾಕಿರುವ ಕಲ್ಲುಗಳು ದರಸ್ಥಿಗೊಂಡಿದ್ದು, ಅವುಗಳನ್ನು ಶೀಘ್ರವಾಗಿ ಸರಿಪಡಿಸುವಂತೆ ಕ್ರಮವಹಿಸಲು ತಿಳಿಸಿರುತ್ತಾರೆ.
8. ಸುಂಕದಕಟ್ಟೆ ಪೈಪ್‌ಲೈನ್ ಕೆಂಪೇಗೌಡ ಉದ್ಯಾನವನದಲ್ಲಿ ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸುವಂತೆ ತಿಳಿಸಿರುತ್ತಾರೆ.
9. ಸರ್ವೀಸ್ ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚುವಂತೆ ಗುತ್ತಿಗೆದಾರರು ಕ್ರಮವಹಿಸುವಂತೆ ತಿಳಿಸಿರುತ್ತಾರೆ.

**ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಹಾಗೂ ವಾರ್ಡ್-73ರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸಭೆಗೆ ಹಾಜರಾಗದೇ ಇರುವುದಕ್ಕೆ ಈ ಕೂಡಲೇ ನೋಟೀಸ್ ಜಾರಿ ಮಾಡಲಾಗುವುದೆಂದು ನೋಡಲ್ ಅಧಿಕಾರಿ ರವರು ತಿಳಿಸಿರುತ್ತಾರೆ.**

**ಸಹಿ:-**
**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ನಂ. 73 ಕೊಟ್ಟಿಗೆಪಾಳ್ಯ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಸಹಿ:-
ವಾರ್ಡ್ ಸಮಿತಿ ಅಧ್ಯಕ್ಷರು,
ಮುಖ್ಯ ಅಭಿಯಂತರು(ರಾ.ರಾ.ನ)
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಗಳನ್ನು:-

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ವಾರ್ಡ್ ಸಂಖ್ಯೆ-73ರ ಸಮಿತಿ ಅಧ್ಯಕ್ಷರು ಹಾಗೂ ಮುಖ್ಯ ಅಭಿಯಂತರವರಿಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು, ರಾರಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
4. ಕೌನ್ಸಿಲ್ ಕಾರ್ಯದರ್ಶಿ, ರವರ ಅವಗಾಹನೆಗೆ ಸಲ್ಲಿಸಲಾಗಿದೆ.
5. ಕಾರ್ಯಪಾಲಕ ಅಭಿಯಂತರರು, ರಾರಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು ಲಗ್ಗೆರೆ ಉಪವಿಭಾಗ ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
8. ಸಹಾಯಕ ನಿರ್ದೇಶಕರು (ಪಶುಸಂಗೋಪನೆ) ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡ್ಬ್ಲೂ.ಎಸ್.ಎಸ್.ಬಿ, ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ, ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
11. ಪೋಲೀಸ್ ಇನ್ಸಪೆಕ್ಟರ್, ಕಾಮಾಕ್ಷಿಪಾಳ್ಯ ಠಾಣೆ, ನಾಗರಬಾವಿ ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
12. ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 73 ಕೊಟ್ಟಿಗೆಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರು,
ಮುಖ್ಯ ಅಭಿಯಂತರು(ರಾ.ರಾ.ನ)
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ